# ಸೂಕ್ತಿಪ್ರಭ

**ವಿದ್ಯೆ** ಗಳಿಸಲು ಪ್ರತಿನಿತ್ಯವೂ ಮಾಹಿತಿಯನ್ನು ಸಂಗ್ರಹಿಸಿ. ಜ್ಞಾನವನ್ನು ಸಂಪಾದಿಸಲು ಪ್ರತಿನಿತ್ಯವೂ ಕೆಲಸಕ್ಕೆ ಬಾರದ ವಿಚಾರಗಳನ್ನು ಮನಸ್ಸಿನಿಂದ ಹೊರಹಾಕಲು ಪ್ರಯತ್ನಿಸಿ.

—ಲಾಓ ತ್ಸೆ

**ಅತ್ಯಂತ** ಬಲಿಷ್ಠರೂ ಕೂಡ ಕೆಲವೊಮ್ಮೆ ದುರ್ಬಲರಾಗುತ್ತಾರೆ; ಹಾಗೂ ಬಹಳ ಬಲ್ಲವರೂ ತಪ್ಪು ಮಾಡುತ್ತಾರೆ. ಇದನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುವುದು ಉತ್ತಮ. —ಮಹಾತ್ಮ ಗಾಂಧಿ

**ನಿಷೇಧಾತ್ಮಕ** ದೃಷ್ಟಿಯುಳ್ಳವರು ಹೇಳುತ್ತಾರೆ, "ಈ ಪ್ರಪಂಚ ಹಾಳಾಗಿ ಹೋಯಿತು" ಎಂದು. ಆದರೆ ನಿಜವಾಗಿ ಹಾಳಾಗಿರುವುದು ನೈಜ ಪ್ರೀತಿ, ಮಾನವರ ನಡುವಣ ಬಾಂಧವ್ಯಗಳು.

—ಆ್ಯಂಟೋನಿಯೋ ಪಿಂಟೋ. ಎಲ್.

**ಒಳ್ಳೆಯ** ಉಪದೇಶಗಳನ್ನು ಮನಃಪೂರ್ವಕ ಸ್ವೀಕರಿಸಿ; ಆದರೆ ನಿಮ್ಮ ಧ್ಯೇಯಗಳಿಗೆ ಅವು ಧಕ್ಕೆ ತರದಿರಲಿ. —ಅನಾಮಿಕ

**ಗಡಿಗೆಯೇ** ಕಲ್ಲಿಗೆ ಬಡಿಯಿತೋ ಅಥವಾ ಕಲ್ಲು ಗಡಿಗೆಗೆ ಬಡಿಯಿತೋ ಎಂಬುದು ಮುಖ್ಯವಲ್ಲ. ಹೇಗೇ ಆದರೂ ಒಡೆಯುವುದು ಗಡಿಗೆಯೇ ಎಂಬುದು ನೆನಪಿಡಬೇಕಾದ ಸತ್ಯ.

—ಮಿಗ್ವೆಲ್. ಡಿ.ಸಿ.

**ಮನುಷ್ಯ** ಸನ್ನಿವೇಶಗಳ ಪ್ರಭಾವದಿಂದ ತಯಾರಾದ ವಸ್ತುವಲ್ಲ. ಸನ್ನಿವೇಶಗಳು ಮನುಷ್ಯನಿಂದ ಸೃಷ್ಟಿಯಾಗುತ್ತವೆ.

—ಬೆಂಜಮಿನ್ ಡಿಸ್ರೇಲಿ

**ವ್ಯಕ್ತಿಯ ಶೀಲವನ್ನು** ತೀರ್ಮಾನಿಸುವ ಎರಡು ಅಂಶಗಳು: ಧೈರ್ಯ ಮತ್ತು ಅನುಕಂಪೆ. —ಸ್ವಾಮಿ ವಿವೇಕಾನಂದ

**ಚಲಿಸುತ್ತಿರುವ** ವಾಹನದಿಂದ ಐದಡಿ ದೂರವಿರಿ; ಕುದುರೆಯಿಂದ ಹತ್ತಡಿ; ಆನೆಯಿಂದ ನೂರಡಿ. ದುಷ್ಟ ವ್ಯಕ್ತಿಗಳಿಂದ ಎಷ್ಟು ದೂರವಿರಬೇಕು ಎಂದು ತೀರ್ಮಾನಿಸುವುದು ಮಾತ್ರ ಅಸಾಧ್ಯ.

—ನಾಣ್ನುಡಿ

**ಕೆಲವು** ಮನಸ್ಸುಗಳು ಕಾಂಕ್ರೀಟಿನಂತೆ ಸಂಪೂರ್ಣ ಗಟ್ಟಿಯಾಗಿ ಎಂದಿಗೂ ಬದಲಾಗದ ಸ್ಥಿತಿಯನ್ನು ಪಡೆದಿರುತ್ತವೆ.

—ಫ್ರಾನ್ಸಿಸ್ ಅಮೇದಿಯೋ

**ಭಯ** ಎನ್ನುವುದು ಮಾರಕ ರೋಗಗಳಿಗೆ ನಾವು ತೆಗೆದುಕೊಳ್ಳುವ ಔಷಧಗಳಂತೆ. ರೋಗವನ್ನು ವಾಸಿಮಾಡುವುದರೊಂದಿಗೆ ಈ ಮದ್ದುಗಳು ನಮ್ಮನ್ನು ಸುಸ್ತು ಮಾಡಿಸಿ, ಮನಸ್ಸು-ಶರೀರಗಳನ್ನು ದುರ್ಬಲಗೊಳಿಸುತ್ತವೆ. ಅಂತೆಯೇ ಭಯವೂ ಕೂಡ. ಮನುಷ್ಯನನ್ನು ದುರ್ಬಲಗೊಳಿಸುತ್ತದೆ. —ಫೆನೆಲಾನ್

**ಕೃತಕವಾಗಿ** ಸಂತೋಷವನ್ನು ಎಂದಿಗೂ ವ್ಯಕ್ತಪಡಿಸಲಾಗದು.

—ಅನಾಮಿಕ

**ಆರೋಗ್ಯವೇ** ಉತ್ತಮ ಉಡುಗೊರೆ, ತೃಪ್ತಿಯೇ ಉತ್ತಮ ಧನ, ವಿಶ್ವಾಸವೇ ಅತ್ಯುತ್ತಮ ಬಾಂಧವ್ಯ. —ಗೌತಮ ಬುದ್ಧ

ನಿಜವಾದ ಸ್ನೇಹಿತರು ನಾವು ಕರೆದಾಗ ನಮ್ಮ ಸಂತೋಷಗಳಲ್ಲಿ ಭಾಗವಹಿಸುತ್ತಾರೆ; ಕರೆಯದೆ ಬಂದು ದುಃಖಗಳಲ್ಲಿ ಸಮಾಧಾನ ನೀಡುತ್ತಾರೆ. —ಡಿ ಡಿ.ಫಲೇರಾ

# ಪ್ರಾರ್ಥನೆ

## ಶಕ್ತಿ ಸ್ತುತಿ

(ಶ್ರೀ ನಿಜಗುಣ ಶಿವಯೋಗಿ ವಿರಚಿತ)

ಪಾಲಿಸೆನ್ನನು ಪದುಳವೆರಸಿ ಪರಶಿವನಿಗತಿ
ಮೇಲೆನಿಪ ಸುಗುಣ ಸಂಪನ್ನೆ ಶರ್ವಾಣಿ ॥ ಪ॥

ಜರೆ ಮರಣವನು ಜಯಿಸಿದಮೃತಸೇವನೆಯುಳ್ಳ
ಹರಿಯಜಾದಿಗಳ ಬಲುಹನಪಹರಿಸಿದಾ
ಗರಳವನು ನಲಿದುಂಡು ಹರನಳುಕದೆ ಉಳಿದ ಭಾ-
ಸುರತೆ ನಿನ್ನೈರದಾಳಿಯ ಮಹಿಮೆ ಗಿರಿಜೆ ॥ ೧॥

ಹೇಳಹೆಸರಿಲ್ಲದಭವನು ನಿನ್ನ ದೆಸೆಯಿಂದ
ಭಾಳಲೋಚನನೆನಿಸಿ ನಿಖಿಳ ನಿರ್ಝರರ
ಮೇಳಕಧಿಪತಿಯಾದನೆಂದೊಡಾಗಮನಿಗಮ
ಜಾಲವೈದುವವೆ ನಿಜ ನುತಿಗೆ ನಗಜಾತೆ ॥ ೨॥

ನಿನಗೆ ತನ್ನರೆಯೊಡಲನೊಲಿದಿತ್ತನೀಶನೆಂ
ದೆನುತಿಹರು ತಿಳಿದು ನೋಡದೆ ಕವೀಶ್ವರರು
ಮನಸಿಜಾರಿಗೆ ಮಂತ್ರಮಯ ಮೂರ್ತಿಗಳನು ನೀ
ನನುಗೊಳಿಸಿ ಪೂಜ್ಯಳೆನಿಸಿದೆ ಲೋಕಜನನಿ ॥ ೩॥

ಜಡೆಗಟ್ಟಿ ತಿರಿದುಂಡು ಮರುಳುಗಳಗೂಡಿ ಮೈ
ದೊಡೆದು ಬೂದಿಯನ್ನು ಸುಡುಗಾಡೊಳಾಡಿ
ಜಡರೀತಿವಡೆದ ರುದ್ರನಿಗೆ ನೀನೊಲಿದು ಕೈ
ವಿಡಿದು ಪಾವನ ಚರಿತಳೆನಿಸಿದೆ ಭವಾನಿ ॥ ೪॥

ಸಿರಿ ಸಕಲ ಸಿದ್ಧಿ ಸಂಪದ ವಿದ್ಯೆ ವಿಭವಾದಿ
ಪರಿಕರದೊಳೊಂದಿ ನೀನುಪಚರಿಸದಿರಲು
ಗುರುಶಂಭುಲಿಂಗದೊಳಗಾವ ಲೇಸಿಹುದಿಳೆಯ
ನರರ ಮನದೊಲವೀಯಲೆಳಸಿದೊಡೆ ಗೌರಿ ॥ ೫॥